2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ,
ಚಿಕ್ಕಮಗಳೂರು

ಸತ್ರ ಮೊಕದ್ದಮೆ ನಂಃ 154/2019

| | | | |
|---|---|---|---|
| ಸಾಕ್ಷಿದಾರರ ಹೆಸರು | - | ಸೈಯದ್ ಸಫೀರ್ ಅಹಮದ್ | ಪಿಡಬ್ಲೂ -3 |
| ತಂದೆಯ ಹೆಸರು | - | ಸೈಯದ್ ಬಷೀರ್ | ಸಿಡಬ್ಲೂ -1 |
| ವಯಸ್ಸು | - | 55 ವರ್ಷ | |
| ಉದ್ಯೋಗ | - | ವ್ಯವಸಾಯ | |
| ವಾಸ ಸ್ಥಳ | - | ಮುತ್ತಿನಕೊಪ್ಪ | |

ದಿನಾಂಕಃ 14-06-2023 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ : ಸರ್ಕಾರಿ ಅಭಿಯೋಜಕರಿಂದ-

1. ನ್ಯಾಯಾಲಯದಲ್ಲಿ ಹಾಜರಿರುವ ಆರೋಪಿತರು ಗೊತ್ತು. ಅವರಿಗೆ ಮುತ್ತಿನಕೊಪ್ಪದಲ್ಲಿರುವ ನನ್ನ ಕಟ್ಟಡದಲ್ಲಿ ಒಂದು ಅಂಗಡಿಯನ್ನು ಬಾಡಿಗೆಗೆ ಕೊಟ್ಟಿದ್ದೆನು. ಪ್ರಾಸಾ.2 ಆರೋಪಿತರ ಮಗಳು. ಪ್ರಾಸಾ.1, ಚಾಸಾ.4 ರಿಂದ ಚಾಸಾ.12 ರವರು ಗೊತ್ತು. ಅವರ ಪೈಕಿ ಚಾಸಾ.7 ಮತ್ತು ಚಾಸಾ.8 ರವರು ನನ್ನ ಸಂಬಂಧಿಕರು.

2. ಮುತ್ತಿನ ಕೊಪ್ಪದ ಸರ್ವೆ ನಂಬರ್ 205/2 ರಲ್ಲಿ ನನಗೆ ಸೇರಿದ 2 ಎಕರೆ 13 ಗುಂಟೆ ಜಮೀನು ಇದೆ. ಸದರಿ ಜಮೀನಿನಲ್ಲಿ ನಾನು ಒಂದು ಕಟ್ಟಡವನ್ನು ಕಟ್ಟಿದ್ದೇನೆ. ಅದರ ಅಸೆಸ್ ಮೆಂಟ್ ನಂಬರ್ 532. ಸದರಿ ಕಟ್ಟಡದಲ್ಲಿರುವ 20x40 ಅಡಿ ವಿಸ್ತೀರ್ಣದ ಒಂದು ಮಳಿಗೆಯನ್ನು ಆರೋಪಿತರಿಗೆ ದಿನಾಂಕ 31.10.2018 ರಂದು ಹೋಟೆಲ್ ನಡೆಸಲು ಬಾಡಿಗೆಗೆ ಕೊಟ್ಟಿದ್ದೆನು. ಆ ಬಗ್ಗೆ 11 ತಿಂಗಳ ಬಾಡಿಗೆ ಕರಾರನ್ನು ಮಾಡಿಕೊಂಡಿದ್ದೆನು. ಸದರಿ ಕಟ್ಟಡದ ಪಕ್ಕದಲ್ಲಿ ಟಾಟಾ ಕಂಪೆನಿಯವರಿಗೆ ಟವರ್ ನಿರ್ಮಾಣ

ಮಾಡಲು ನಾನು ಜಾಗವನ್ನು ಕೊಟ್ಟಿದ್ದೆನು. ಸದರಿ ಜಾಗಕ್ಕೆ ಸದರಿ ಕಂಪೆನಿಯವರೇ ಕಾಂಪೌಂಡನ್ನು ನಿರ್ಮಿಸಿಕೊಂಡಿದ್ದರು. ನಂತರ ಅವರು ಟವರ್ ಅನ್ನು ತೆಗೆದುಕೊಂಡು ಹೋಗಿದ್ದರು. ನಾನು ಸದರಿ ಟವರ್ ನ ಪಕ್ಕದಲ್ಲಿ ಮನೆಯನ್ನು ಕಟ್ಟುತ್ತಿದ್ದೆನು. ಆ ಕಾರಣಕ್ಕೆ ನಾನು ದಿನಾಂಕ 18-06-2019 ರಂದು ಮೇಲೆ ಹೇಳಿದಂತೆ ಟಾಟಾ ಕಂಪೆನಿಯವರು ನಿರ್ಮಿಸಿದ್ದ ಕಾಂಪೌಂಡನ್ನು ತೆರವುಗೊಳಿಸಲು ಹೋದೆನು. ಆಗ ಸಮಯ ಸಂಜೆ 6.00 ಗಂಟೆಯಾಗಿತ್ತು. ನಾನು ಕಾಂಪೌಂಡಿನ ಇಟ್ಟಿಗೆಯನ್ನು ಕೀಳಲು ಹೋದಾಗ 2 ನೇ ಆರೋಪಿ ಅಲ್ಲಿಗೆ ಬಂದು ನಾನು ನ್ಯಾಯಾಲಯದಲ್ಲಿ ತಡೆ ಆಜ್ಞೆಯನ್ನು ತಂದಿದ್ದೇನೆ ನೀನು ಅಲ್ಲಿ ಏನು ಮಾಡಬಾರದು ಎಂದು ಹೇಳಿದರು. ಆಗ ನನ್ನ ಮತ್ತು ಆರೋಪಿತರ ನಡುವೆ ಮಾತಿನ ಚಕಾಮಕಿ ನಡೆಯಿತು. 2 ನೇ ಆರೋಪಿ ನನ್ನ ಕೊರಳಪಟ್ಟಿಯನ್ನು ಹಿಡಿದುಕೊಂಡು ಸೂಳೆಮಗನೇ, ಬೋಳಿಮಗನೇ ಎಂದು ಬೈದನು. ಆಗ ನಾನು ಕೂಡಲೇ ನ.ರಾ.ಪುರ ಪೊಲೀಸ್ ಠಾಣೆಗೆ ಫೋನ್ ಮಾಡಿದೆನು. 10 ನಿಮಿಷದ ನಂತರ ಸದರಿ ಠಾಣೆಯಿಂದ ಮಂಜುನಾಥ್ ಎಂಬ ಪೊಲೀಸರು ಸ್ಥಳಕ್ಕೆ ಬಂದು 1 ನೇ ಆರೋಪಿಯೊಂದಿಗೆ ಮಾತನಾಡುತ್ತಿದ್ದರು. ನಂತರ 1 ನೇ ಆರೋಪಿ ತಮ್ಮ ಹೋಟೆಲ್ ನ ಒಳಗೆ ಹೋದರು. ಆಗ ಅವರ ಒಂದು ಮಗು ಹೋಟೆಲ್ ನ ಒಳಗಿನಿಂದ ಅತ್ತುಕೊಂಡು ಹೊರಗೆ ಬಂತು. ನಂತರ 1 ನೇ ಆರೋಪಿ ಹೋಟೆಲ್ ನಿಂದ ತನ್ನ ಹೆಣ್ಣು ಮಗುವನ್ನು ಹೊರಗೆ ಎಳೆದುಕೊಂಡು ಬಂದು ಚಾಕುವಿನಿಂದ ಸದರಿ ಮಗುವಿನ ಕುತ್ತಿಗೆಯನ್ನು ಕುಯ್ದುಳು. ಸದರಿ ಮಗುವಿನ

ಕುತ್ತಿಗೆಯನ್ನು ಕುಯ್ದು ಸಾಯಿಸಿ ಅದನ್ನು ನಿಮ್ಮ ಮೇಲೆ ಹಾಕುತ್ತೇನೆ ಎಂದು 1 ನೇ ಆರೋಪಿ ನನಗೆ ಹೇಳಿದಳು. ಆಗ ಮಂಜುನಾಥ್ ಪೊಲೀಸರು ಮತ್ತು ಫ್ರಾಸಾ.1 ರವರು 1 ನೇ ಆರೋಪಿಯ ಕೈಯಲ್ಲಿದ್ದ ಚಾಕುವನ್ನು ಕಸಿದುಕೊಂಡರು. ಆರೋಪಿತರ ಮಗಳ ಕುತ್ತಿಗೆ ಕುಯ್ದಿದ್ದರಿಂದ ಗಾಯವಾಗಿ ರಕ್ತ ಬಂದಿತ್ತು. ಸದರಿ ಮಗುವನ್ನು ಚಾಸಾ.6 ಅಬ್ದುಲ್ ವಜೀದ್ ರವರು ಮುತ್ತಿನಕೊಪ್ಪ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋದರು. ಆ ಸಮಯದಲ್ಲಿ ಊರಿನ ಸುಮಾರು 100-150 ಜನ ಸೇರಿ ಭಯದ ವಾತಾವರಣ ಸೃಷ್ಟಿಯಾಯಿತು. ನಂತರ ನಾನು ಮನೆಗೆ ಹೋಗಿ ನನ್ನ ಕುಟುಂಬದವರೊಂದಿಗೆ ಚರ್ಚಿಸಿ ಅದೇ ದಿನ ರಾತ್ರಿ 10.30 ಗಂಟೆಗೆ ನ.ರಾ.ಪುರ ಪೊಲೀಸ್ ಠಾಣೆಗೆ ಹೋಗಿ ಆರೋಪಿತರ ವಿರುದ್ಧ ದೂರನ್ನು ಕೊಟ್ಟೆನು. ಸದರಿ ದೂರನ್ನು ನೋಡಿದರೆ ಗುರುತಿಸುತ್ತೇನೆ.

3. ಸಾಕ್ಷಿಯು ದೂರು ಮತ್ತು ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ ಮೇರೆಗೆ ಸದರಿ ದೂರನ್ನು ನಿಪಿ.2 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.2(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ಪ್ರಥಮ ವರ್ತಮಾನ ವರದಿಯ ಕಲಂ 12 ರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ ಮೇರೆಗೆ ಪ್ರಥಮ ವರ್ತಮಾನ ವರದಿಯನ್ನು ನಿಪಿ.3 ಎಂದು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.3(ಎ) ಎಂದು ಗುರುತಿಸಲಾಯಿತು. ನನಗೆ ಕನ್ನಡ ಬರೆಯಲು ಬರದ ಕಾರಣ ದೂರನ್ನು ಟೈಪ್ ಮಾಡಿಸಿಕೊಂಡು ಹೋಗಿ ಕೊಟ್ಟಿರುತ್ತೇನೆ.

4. ದಿನಾಂಕ 20.06.2019 ರಂದು ನ.ರಾ.ಪುರ ಪೊಲೀಸರು ಮೇಲೆ ಹೇಳಿದಂತೆ ಘಟನೆ ನಡೆದ ಸ್ಥಳದಲ್ಲಿ ಮಹಜರ್ ಅನ್ನು ಜರುಗಿಸಲು ಬಂದಿದ್ದರು. ಆಗ ನಾನು ಪೊಲೀಸರಿಗೆ ಘಟನೆ ನಡೆದ ಸ್ಥಳವನ್ನು ತೋರಿಸಿದೆನು. ಆಗ ಚಾಸಾ.10 ಪ್ರಸನ್ನ ಮತ್ತು ಚಾಸಾ.11 ಶ್ರೀನಿವಾಸ್ ರವರು ಸಾಕ್ಷಿದಾರರಾಗಿ ಬಂದಿದ್ದರು. ನಾನು ಪೊಲೀಸರಿಗೆ ಮೇಲೆ ಹೇಳಿದಂತೆ ನಡೆದ ವಿಚಾರವನ್ನು ತಿಳಿಸಿ ಗಲಾಟೆಯಾದ ಸ್ಥಳವನ್ನು ತೋರಿಸಿದೆನು. ಸದರಿ ಸ್ಥಳದಲ್ಲಿ ಪೊಲೀಸರು ಸಂಜೆ 5.00 ಗಂಟೆಯಿಂದ 5.30 ಗಂಟೆಯವರೆಗೆ ಮಹಜರನ್ನು ಜರುಗಿಸಿ ಅದಕ್ಕೆ ನನ್ನ ಸಹಿಯನ್ನು ಪಡೆದುಕೊಂಡರು. ಮಹಜರನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ಮಹಜರ್ ಮತ್ತು ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ ಮೇರೆಗೆ ಸದರಿ ಮಹಜರನ್ನು ನಿಪಿ.4 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.4(ಎ) ಎಂದು ಗುರುತಿಸಲಾಯಿತು.

5. ಸದರಿ ಮಹಜರ್ ಗೆ ನನ್ನ ಜೊತೆ ಚಾಸಾ.10 ಮತ್ತು ಚಾಸಾ.11 ರವರು ಸಹಿ ಮಾಡಿದ್ದಾರೆ. ಮೇಲೆ ಹೇಳಿದಂತೆ ಪೊಲೀಸರು ಮಹಜರ್ ಮಾಡುವ ಸಮಯದಲ್ಲಿ ಫೋಟೋವನ್ನು ತೆಗೆದುಕೊಂಡರು. ಸದರಿ ಫೋಟೋವನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಗೆ ಒಂದು ಫೋಟೋವನ್ನು ತೋರಿಸಲಾಗಿ ಅದರಲ್ಲಿ ತನ್ನ ಇರುವಿಕೆಯನ್ನು ನೋಡಿ ಗುರುತಿಸಿ ಅದನ್ನು ಪೊಲೀಸರು ಮೇಲೆ ಹೇಳಿದಂತೆ ಗಲಾಟೆಯಾದ ಸ್ಥಳದಲ್ಲಿ ಮಹಜರ್ ಮಾಡುವ ಸಮಯದಲ್ಲಿ ತೆಗೆದುಕೊಂಡಿರುವುದಾಗಿ ನುಡಿದಿರುತ್ತಾರೆ. ಸದರಿ ಫೋಟೋವನ್ನು ಈಗಾಗಲೇ ನಿಪಿ.1 ಎಂದು

ಗುರುತಿಸಲಾಗಿರುತ್ತದೆ. ಸದರಿ ಫೋಟೋದಲ್ಲಿ ತನ್ನೊಂದಿಗೆ ಚಾಸಾ.10 ಮತ್ತು ಚಾಸಾ.11 ರವರು ಇರುವುದಾಗಿ ನುಡಿದಿರುತ್ತಾರೆ.

6. 1 ನೇ ಆರೋಪಿ ತನ್ನ ಮಗಳ ಕುತ್ತಿಗೆಯನ್ನು ಕುಯ್ದು ಚಾಕುವನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ಈಗಾಗಲೇ ಮು.ಮಾ.1 ಎಂದು ಗುರುತಿಸಲ್ಪಟ್ಟಿರುವ ಚಾಕುವನ್ನು ನೋಡಿ 1 ನೇ ಆರೋಪಿ ತನ್ನ ಮಗಳ ಕುತ್ತಿಗೆಯನ್ನು ಕುಯ್ದು ಚಾಕು ಅದೇ ಎಂದು ನುಡಿದಿರುತ್ತಾರೆ.

**(ಪಾಟೀ ಸವಾಲು: ಆರೋಪಿತರ ಪರ ವಕೀಲರು ಪ್ರತ್ಯಕ್ಷ ಸಾಕ್ಷಿದಾರರು ಎಂದು ಅಂತಿಮ ವರದಿಯಲ್ಲಿ ನಮೂದಿಸಿರುವ ಚಾಸಾ.4 ರಿಂದ ಚಾಸಾ.12 ರವರ ಮುಖ್ಯ ವಿಚಾರಣೆಯಾಗುವವರೆಗೆ ಪ್ರಸ್ತುತ ಸಾಕ್ಷಿಯ ಪಾಟೀ ಸವಾಲಿಗೆ ಸಮಯಾವಕಾಶ ಕೋರಿ ಅರ್ಜಿ ಸಲ್ಲಿಸಿದ ಮೇರೆಗೆ ಅದನ್ನು ಪರಿಗಣಿಸಿ ಸಾಕ್ಷಿಯ ಪಾಟೀ ಸವಾಲನ್ನು ಸದರಿ ಸಾಕ್ಷಿದಾರರ ವಿಚಾರಣೆಯಾಗುವವರೆಗೆ ಮುಂದೂಡಲಾಯಿತು.)**

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯ್ತು)

ಓ.ಹೇ.ಕೇ.ಸ.ಇ.ಎ.ಒ.

ಸಹಿ/-
(ಭಾನುಮತಿ ಬಿ.ಸಿ)
2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿಯ ಸಹಿ

ಹೇಮಾ.